| ಕ್ರ ಸಂ | ಪ್ರಕರಣ ಸಂಖ್ಯೆ | ವಿಷಯ | ಕ್ರಮ ಕೈಗೊಂಡ ಬಗ್ಗೆ ವರದಿ |
|---|---|---|---|
| 1 | ಟಿ ಎಫ್ 407/2010 ದಿನಾಂಕ.04.02.10 ಮತ್ತು 02.06.10 | ಕಂಠೇನಹಳ್ಳಿ ಸನಂ 72ರ ಜಮೀನಿನ ಒತ್ತುವರಿ ಬಗ್ಗೆ | ಕಂಠೇನಹಳ್ಳಿ ಸನಂ 72ರಲ್ಲಿ ಕಟ್ಟಿದ ಕಟ್ಟಡವನ್ನು ತೆರವುಗೊಳಿಸಲು ಸಂರಕ್ಷಣಾ ಕಾರ್ಯಪಡೆ ಬೆಂಗಳೂರು ರವರು ಸೂಚಿಸಿದ್ದರ ಮೇರೆ ಉಚ್ಚನ್ಯಾಯಾಲಯದಲ್ಲಿದ್ದು ಕಂಡಿಕೆವಾರು ಉತ್ತರದೊಡನೆ ಕಡತವನ್ನು ದಿನಾಂಕ:14.10.2010 ರಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ |
| 2 | ಟಿ ಎಫ್ 436/2010 ದಿನಾಂಕ:10.02.10 | ಮಿರ್ಲೆ ಸರ್ಕಾರಿ ಕೆರೆ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ | ಮಿರ್ಲೆ ಕೆರೆ ಒತ್ತುವರಿ ತೆರವುಗೊಳಿಸಿದೆ ಮತ್ತು ಪತ್ರ ಬರೆದಿರುತ್ತದೆ. ದಿನಾಂಕ:13.04.10 |
| 3 | ಟಿ ಎಫ್ 446/2010 ದಿನಾಂಕ:10.02.10 | ಗಂಧನಹಳ್ಳಿ ಸನಂ 314ರ ಜಮೀನು ಒತ್ತುವರಿ ಬಗ್ಗೆ | ಗಂಧನಹಳ್ಳಿ ಕೆರೆ ಸನಂ 314 ಅಳತೆಯಾಗಿರುತ್ತದೆ. ಒತ್ತುವರಿ ತೆರವುಗೊಳಿಸಿ ಪತ್ರ ಬರೆದಿರುತ್ತದೆ. ದಿನಾಂಕ:15.07.2010 |
| 4 | ಟಿ ಎಫ್ 336/2010 ದಿನಾಂಕ:03.02.10 | ಕಂಠೇನಹಳ್ಳಿ ಸನಂ 72ರ ಜಮೀನು ಒತ್ತುವರಿ ಬಗ್ಗೆ | ಕಂಠೇನಕಹಳ್ಳಿ ಸನಂ 72ರ ಜಮೀನು ಒತ್ತುವರಿಯಾಗಿರುವುದಿಲ್ಲವೆಂದು ಈಗಾಗಲೇ ಪತ್ರ ಬರೆದಿದೆ. ದಿನಾಂಕ:26.04.2010 |
| 5 | ಟಿ ಎಫ್ 571/2010 ದಿನಾಂಕ:25.02.10 | ಕಾಕನಹಳ್ಳಿ ಸನಂ 25ರ ಜಮೀನಿನ ಒತ್ತುವರಿ ಬಗ್ಗೆ | ಕಾಕನಹಳ್ಳಿ ಸನಂ 25ರ ಕೆರೆಯನ್ನು ಜಿ.ಡಿ.ರಾಜೇಗೌಡ ರವರಿಂದ ಒತ್ತುವರಿಯನ್ನು ತೆರವುಗೊಳಿಸಿದೆ ಪತ್ರಬರೆದಿದೆ. ದಿನಾಂಕ:31.03.2010 |
| 6 | ಟಿ ಎಫ್ 593/2010 ದಿನಾಂಕ:02.03.10 | ಕಾಕನಹಳ್ಳಿ ಸನಂ 25ರ ಜಮೀನಿನ ಒತ್ತುವರಿ ಬಗ್ಗೆ | ತೆರವುಗೊಳಿಸಿದೆ ದಿನಾಂಕ:31.03.2010 |
| 7 | .. | ಕಾಕನಹಳ್ಳಿ ಸನಂ 25ರಲ್ಲಿನ ಸರ್ಕಾರಿ ಕೆರೆ 8 02 ಎಕರೆ ಜಮೀನನ್ನು ಶ್ರೀ ಜಿ.ಡಿ.ರಾಜೇಗೌಡ ಎಂಬುವರು ಒತ್ತುವರಿ ಮಾಡಿರುವ ಬಗ್ಗೆ | ತೆರವುಗೊಳಿಸಿದೆದಿನಾಂಕ:31.03.2010 |
| 8 | ಟಿ ಎಫ್ 819/2010 ದಿನಾಂಕ:09 07.10 | ಗಂಧನಹಳ್ಳಿ ಸನಂ 314ರ ಬಾಜು ಜಮೀನು ಒತ್ತುವರಿ ಬಗ್ಗೆ | ಗಂಧನಹಳ್ಳಿ ಸನಂ 314ರ ಬಾಜು ಕೆರೆಯಾಗಲೀ ಸ್ಮಶಾನವಾಗಲೀ ಇರುವುದಿಲ್ಲ. ಸರ್ಕಾರಿ ಕೆರೆ ಸನಂ 459 ಆಗಿದ್ದು ಮತ್ತು ಸ್ಮಶಾನ ಸನಂ 137 ಆಗಿದ್ದು ಒತ್ತುವರಿಯಾಗಿದ್ದು ತೆರವುಗೊಳಿಸಿ ಪತ್ರ ಬರೆದಿರುತ್ತದೆ. ದಿನಾಂಕ:21.08.2010 |

ತಹಶೀಲ್ದಾರ್
ಕೃಷ್ಣರಾಜನಗರ ತಾಲ್ಲೂಕ್.

**ತಹಸೀಲ್ದಾರ್‌ರವರ ಕಾರ್ಯಾಲಯ, ಕೃಷ್ಣರಾಜನಗರ ತಾಲ್ಲೂಕು**

ನಂ:ಎಲ್.ಎನ್.ಡಿ:08/09-10 ದಿನಾಂಕ:26.04.2010.

ಗೆ,

ಸದಸ್ಯ ಕಾರ್ಯದರ್ಶಿ,
ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ,
ಬೆಂಗಳೂರು-560009.

ಮಾನ್ಯರೇ,

ವಿಷಯ: ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ

ಉಲ್ಲೇಖ: 1) ಜಿಲ್ಲಾಧಿಕಾರಿಯವರು ಮೈಸೂರು ಜಿಲ್ಲೆ ಮೈಸೂರು ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ(2)ಸಿಆರ್:288/09-10 ದಿ:22.2.10 ಮತ್ತು ಟಿಎಫ್336/2010 ದಿ:19.03.2010

2) ರಾಜಸ್ವ ನಿರೀಕ್ಷಕರು ಕಸಬಾ ರವರ ವರದಿ ನಂ:22/10-11 ದಿ:17.04.10.

***

ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1)ರಲ್ಲಿ ಕೆ.ಆರ್.ನಗರ ತಾಲ್ಲೂಕು ಕಂಠೇನಹಳ್ಳಿ ಸನಂ 72ರ ಸ್ಕೂಲ್ ಜಾಗವನ್ನು ಒತ್ತುವರಿ ಮಾಡಿ ಸರ್ಕಾರಿ ನೌಕರರು ಮನೆ ಕಟ್ಟಿರುವ ಬಗ್ಗೆ, ಸಲ್ಲಿಸಿರುವ ದೂರಿನ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಿರುವ ಮೇರೆ ಉಲ್ಲೇಖ (2)ರಲ್ಲಿ ರಾಜಸ್ವ ನಿರೀಕ್ಷಕರು ಕಸಬಾ ರವರು ಕಂಠೇನಹಳ್ಳಿ ಸನಂ 72 ರಲ್ಲಿ 0-20 ಗುಂಟೆ ಬಿಳ್ ವಿದ್ಯಾಸಂಸ್ಥೆಗೆ ಮಂಜೂರಾಗಿದ್ದು ಈ ಜಾಗದಲ್ಲಿ ಶಾಲೆ ಮತ್ತು ಮೈದಾನವಿದ್ದು ಯಾವುದೇ ಒತ್ತುವರಿ ಆಗಿರುವುದಿಲ್ಲ. ಹಾಗೂ ಇದೇ ಸನಂ ನಲ್ಲಿ ಬಾಲಕೀಯರ ಪ್ರೌಢಶಾಲೆಗೆ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿದೆ. ಇದನ್ನು ಬಿಟ್ಟರೇ ಈ ಸನಂ ನಲ್ಲಿ ಯಾವುದೇ ಶಾಲೆಗೆ ಸ್ಥಳ ಮಂಜೂರಾಗಿರುವುದಿಲ್ಲ. ಈ ಸನಂ ನಲ್ಲಿ ಪುರಸಭೆ ವತಿಯಿಂದ ಆಶ್ರಯ ಮನೆಗೆ ನಿವೇಶನ ಹಾಗೂ ಹಕ್ಕುಪತ್ರ ನೀಡಿದ್ದು ಹಕ್ಕುಪತ್ರದಂತೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಆದುದರಿಂದ ಯಾವುದೇ ಶಾಲೆಗೆ ಮಂಜೂರಾದ ಜಾಗವು ಸರ್ಕಾರಿ ನೌಕರರಿಂದ ಒತ್ತುವರಿಯಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಸದರಿ ವರದಿಯನ್ನು ಅನುಸರಿಸಿ ಕಂಠೇನಹಳ್ಳಿ ಸನಂ 72 ರಲ್ಲಿ ಸ್ಕೂಲ್ ಜಾಗವನ್ನು ಒತ್ತುವರಿ ಮಾಡಿ ಸರ್ಕಾರಿ ನೌಕರರು ಮನೆ ಕಟ್ಟಿರುವುದಿಲ್ಲವೆಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

ಪ್ರತಿಯನ್ನು
1. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ಮಾಹಿತಿಗಾಗಿ ಅವಗಾಹನೆಗೆ ಸಲ್ಲಿಸಿದೆ.
2. ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಾಗ, ಹುಣಸೂರು ರವರ ಅವಗಾಹನೆಗೆ ಸಲ್ಲಿಸಿದೆ

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

3/9/10

30/8/10

ತಹಸೀಲ್ದಾರ್‌ರವರ ಕಾರ್ಯಾಲಯ, ಕೃಷ್ಣರಾಜನಗರ ತಾಲ್ಲೂಕು

ನಂ:ಎಲ್.ಎನ್.ಡಿ:132/09-10 ದಿನಾಂಕ:15.07.2010.

ಗೆ,

ಸದಸ್ಯ ಕಾರ್ಯದರ್ಶಿ,
ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ,
ಕೆಂಪೇಗೌಡ ರಸ್ತೆ,
ಬೆಂಗಳೂರು-560009.

ಮಾನ್ಯರೇ,

ವಿಷಯ: ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ

ಉಲ್ಲೇಖ: 1) ತಮ್ಮ ಪತ್ರದ ಸಂಖ್ಯೆ:ಟಿಎಫ್:446/2010 ದಿ:10.12.10.
2) ರಾಜಸ್ವ ನಿರೀಕ್ಷಕರು ಹೊಸಅಗ್ರಹಾರ ರವರ ವರದಿ ನಂ:125/10-11 ದಿ:30.06.10.

***

ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1)ರಲ್ಲಿ ವಿ.ಸಿ.ಮಹೋಹರ ಗಂಧನಹಳ್ಳಿ ಸನಂ 314 ರ ಸರ್ಕಾರಿ ಜಮೀನು ಕೆರೆ ಹಾಗೂ ಸ್ಮಶಾನದ ಒತ್ತುವರಿಯನ್ನು ವೈಯಕ್ತಿಕ ಗಮನಹರಿಸಿ ಕಾನೂನುರೀತ್ಯಾ ಸೂಕ್ತ ಕ್ರಮ ಜರುಗಿಸಿ ವರದಿ ಸಲ್ಲಿಸುವಂತೆ ಕೋರಿರುವ ವಿಚಾರದಲ್ಲಿ ಉಲ್ಲೇಖ (2)ರಲ್ಲಿ ರಾಜಸ್ವ ನಿರೀಕ್ಷಕರು ಹೊಸಅಗ್ರಹಾರರವರು ಗಂಧನಹಳ್ಳಿ ಕೆರೆಯ ಸನಂ 314 ಆಗಿರುವುದಿಲ್ಲ ಸನಂ 459 ಆಗಿರುತ್ತದೆ. ಗಂಧನಹಳ್ಳಿ ಸನಂ 459ರ ಕೆರೆಯ 23-37 ಎಕರೆ ಆಗಿರುತ್ತದೆ. ಸದರಿ ಕೆರೆಯನ್ನು ಗಂಧನಹಳ್ಳಿ ಗ್ರಾಮದ 17 ಜನರು 2-33½ ಎಕರೆ ಒತ್ತುವರಿ ಮಾಡಿಕೊಂಡಿದ್ದು, ಸದರಿ ಕೆರೆಯನ್ನು ಸಹಾಯಕ ಅಭಿಯಂತರರು ನೀರಾವರಿ ಇಲಾಖೆ ಹಾಗೂ ಗಂಧನಹಳ್ಳಿ ಗ್ರಾಮಸ್ಥರ ಸಮಕ್ಷಮದಲ್ಲಿ ಕೆರೆ ಒತ್ತುವರಿಯನ್ನು ಜೆ.ಸಿ.ಬಿ ಮತ್ತು ಹಿಟಾಚಿಯಂತ್ರ ಬಳಸಿ ಕೆರೆ ಸುತ್ತಲೂ ಟ್ರಾಂಚ್ ತೆಗೆಹಿಸಿ ಒತ್ತುವರಿಯನ್ನು ದಿನಾಂಕ:30.06.2010 ರಂದು ಬೆಳಿಗ್ಗೆ 9-30 ಗಂಟೆಯಿಂದ ಒತ್ತುವರಿ ತೆರವುಮಾಡಿಸಲಾಗಿದೆ ಎಂದು ಗ್ರಾಮಸ್ಥರ ಮಹಜರ್‌ನೊಡನೆ ವರದಿ ಸಲ್ಲಿಸಿರುತ್ತಾರೆ.

ಅದರಂತೆ ಹೊಸಅಗ್ರಹಾರ ಹೊಬಳಿ ಗಂಧನಹಳ್ಳಿ ಗ್ರಾಮದ ಸನಂ 459ರ ಕೆರೆಯ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ

ಸಹಿ/-
ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

ಪ್ರತಿಯನ್ನು

1. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ನಮ್ರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಾಗ, ಹುಣಸೂರು ರವರ ಅವಗಾಹನೆಗೆ ಸಲ್ಲಿಸಿದೆ

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

27/10/10

## ತಹಸೀಲ್ದಾರ್‌ರವರ ಕಾರ್ಯಾಲಯ, ಕೃಷ್ಣರಾಜನಗರ ತಾಲ್ಲೂಕು

ನಂ:ಎಲ್.ಎನ್.ಡಿ:131/09-10 ದಿನಾಂಕ:13.04.2010.

ಗೆ,

ಸದಸ್ಯ ಕಾರ್ಯದರ್ಶಿ,
ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ,
ಬೆಂಗಳೂರು-560009

ಮಾನ್ಯರೇ.

ವಿಷಯ: ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ

ಉಲ್ಲೇಖ: 1) ತಮ್ಮ ಪತ್ರದ ಸಂಖ್ಯೆ:ಟಿಎಫ್436/2010 ದಿ:10.02.2010.
2) ಉಪತಹಸೀಲ್ದಾರ್ ಮಿರ್ಲೆ ರವರ ವರದಿ ನಂ:ಡಿಟಿಎಂ:ಒತ್ತುವರಿ 42/2009-10 ದಿ;06.04.10.

***

ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖದಲ್ಲಿ ಕೆ.ಆರ್.ನಗರ ತಾಲ್ಲೂಕು ಮಿರ್ಲೆ ಹೊಬಳಿ ಮಿರ್ಲೆ ಗ್ರಾಮದ ಸನಂ 1049 ರಲ್ಲಿನ ಕೆರೆಯನ್ನು ಒತ್ತುವರಿ ಮಾಡಿರುವ ಬಗ್ಗೆ ವೈಯಕ್ತಿಕ ಗಮನಹರಿಸಿ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುವ ಮೇರೆ ಉಲ್ಲೆಖ (2)ರಲ್ಲಿ ತಹಸೀಲ್ದಾರರವರು, ಉಪತಹಸೀಲ್ದಾರ ಮಿರ್ಲೆ ರವರು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಂ.5 ಹಾರಂಗಿನಾಲಾ ಉಪವಿಭಾಗ, ಕೆ.ಆರ್.ನಗರ ಮತ್ತು ಸರ್ವೇಯರ್ ರವರೊಡಗೂಡಿ ಕೆರೆಯನ್ನು ಅಳತೆ ಮಾಡಿ ಗಡಿ ಗುರ್ತಿಸಿ ಅನಧಿಕೃತವಾಗಿ ಒತ್ತುವರಿ ಮಾಡಿದ್ದವರನ್ನು ತೆರವುಗೊಳಿಸಲಾಯಿತು. ಮತ್ತು ಜೆಸಿಬಿ ಯಂತ್ರವನ್ನು ಬಳಸಿ ಟ್ರೆಂಚ್ ತೆಗೆಯಿಸಲಾಗಿದೆ ಒತ್ತುವರಿ ತೆರವು ಮಾಡುವ ಸಂಧರ್ಭದಲ್ಲಿ ಸ್ವಲ್ಪ ಬೆಳೆ ಇದ್ದುದನ್ನು ಒತ್ತುವರಿದಾರರೇ ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಸ್ಥರ ಮಹಜರ್‌ನೊಂದಿಗೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅನುಸರಿಸಿ ಮಿರ್ಲೆ ಹೋಬಳಿ ಮಿರ್ಲೆ ಗ್ರಾಮದ ಸನಂ 1049 ರ ಕೆರೆಯನ್ನು ಒತ್ತುವರಿಯಿಂದ ತೆರವುಗೊಳಿಸಿರುತ್ತಾರೆಂಬ ಅಂಶವನ್ನು ತಮ್ಮ ಅವಗಾಹನಗೆ ಸಲ್ಲಸಿದೆ.

ತಮ್ಮ ನಂಬುಗೆಯ

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

ಪ್ರತಿಯನ್ನು

1. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ನಮ್ರ ಅವಗಾಹನೆಗೆ ಸಲ್ಲಿಸಿದೆ.
2. ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಾಗ, ಹುಣಸೂರು ರವರ ಅವಗಾಹನೆಗೆ ಸಲ್ಲಿಸಿದೆ

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

27/10/10

## ತಹಸೀಲ್ದಾರ್‌ರವರ ಕಾರ್ಯಾಲಯ, ಕೃಷ್ಣರಾಜನಗರ ತಾಲ್ಲೂಕು

ನಂ:ಎಲ್.ಎನ್.ಡಿ:137/09-10 ದಿನಾಂಕ:31.03.2010.

ಗೆ,

ಸದಸ್ಯ ಕಾರ್ಯದರ್ಶಿ,
ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ,
ಬೆಂಗಳೂರು,-560009

ಮಾನ್ಯರೇ.

ವಿಷಯ: ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ

ಉಲ್ಲೇಖ: 1) ತಮ್ಮ ಪತ್ರದ ಸಂಖ್ಯೆ:ಟಿಎಫ್571/2010 ದಿ:25.02.2010.
2) ರಾಜಸ್ವ ನಿರೀಕ್ಷಕರು ಹೊಸಅಗ್ರಹಾರ ರವರ ವರದಿ ನಂ: ರಾನಿಹೋ:73/09-10 ದಿನಾಂಕ:19.03.2010.

***

ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ(1)ರಲ್ಲಿ ಕಾಕನಹಳ್ಳಿ ಸನಂ 24 ರ ಕೆರೆ ಜಮೀನನ್ನು ಜಿ.ಡಿ ರಾಜೇಗೌಡರವರು ಒತ್ತುವರಿ ಮಾಡಿರುವ ಬಗ್ಗೆ ವೈಯಕ್ತಿಕ ಗಮನಹರಿಸಿ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸಿ ವರದಿಯನ್ನು ಸಲ್ಲಿಸಲು ಸೂಚಿಸಿರುವ ಮೇರೆ ಉಲ್ಲೇಖ (2)ರಲ್ಲಿ ರಾಜಸ್ವ ನಿರೀಕ್ಷಕರು ಹೊಸಅಗ್ರಹಾರ ರವರು ಕಾಕನಹಳ್ಳಿ ಸನಂ 25 ರಲ್ಲಿ 8-02 ಎಕರೆ ಸರ್ಕಾರಿ ಕೆರೆಯನ್ನು ದಿನಾಂಕ:12.03.2010 ರಂದು ಬೆಳಗ್ಗೆ 8.30 ರಂದು ಕೆರೆ ಒತ್ತುವರಿಯನ್ನು ಅಳತೆಮಾಡಿ ತೆರವುಗೊಳಿಸುವ ಬಗ್ಗೆ ಸಂಬಂಧಪಟ್ಟ ಭೂಮಾಪಕರುಗಳು ಹಾಗೂ ಭೂಮಾಪನ ಪರ್ಯಾವೇಕ್ಷಕರು ಮತ್ತು ರಾಜೇಗೌಡ ಬಿನ್ ಲೇಟ್ ದೊಡ್ಡೇಗೌಡ ಗಂಧನಹಳ್ಳಿ ಮತ್ತು ಕಾಕನಹಳ್ಳಿ ಗ್ರಾಮದ ಕೃಷ್ಣ ಬಿನ್ ಲೇಟ್ ವೆಂಕಟೇಶ್ ಮತ್ತು ಗ್ರಾಮಸ್ಥರು ಸೇರಿ ಸರ್ವೇ ಮಾಡಿಸಿ ಕೆರೆ ಒತ್ತುವರಿಯನ್ನು ರಾಜೇಗೌಡ ಬಿನ್ ಲೇಟ್ ದೊಡ್ಡೇಗೌಡ ಇವರಿಂದ ಬಿಡಿಸಿ ಅಳತೆ ಕಲ್ಲು ನಡೆಸಿ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಎಂದು ಮಹಜರ್ ಸಹಿತ ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಅನುಸರಿಸಿ ಕಾಕನಹಳ್ಳಿ ಸನಂ 25ರ ಕರೆ ಜಮೀನನ್ನು ಜಿ.ಡಿ.ರಾಜೇಗೌಡ ರವರಿಂದ ಒತ್ತುವರಿಯಿಂದ ತೆರವುಗೊಳಿಸಿದೆ ಎಂಬ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ

ಸಹಿ:
ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

ಪ್ರತಿಯನ್ನು

1. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ನಮ್ರ ಅವಗಾಹನೆಗೆ ಸಲ್ಲಿಸಿದೆ.
2. ಉಪವಿಭಾಗಾಧಿಕಾರಿಗಳು, ಹುಣಸೂರು ಉಪವಿಭಾಗ, ಹುಣಸೂರು ರವರ ಅವಗಾಹನೆಗೆ ಸಲ್ಲಿಸಿದೆ

ತಹಸೀಲ್ದಾರ್,
ಕೃಷ್ಣರಾಜನಗರ ತಾಲ್ಲೂಕು.

27/10/10